ಶ್ರೀ ಬಿ. ಸಿ. ನಂಜುಂಡಯ್ಯ.—ಈ ಕಟ್ಟಡವನ್ನು ಡಿಸ್ಟ್ರಿಕ್ಟ್ ಬೋರ್ಡಿನವರಿಂದ ತೆಗೆದುಕೊಂಡು ಯೂನಿವರ್ಸಿಟಿಯವರೇ ನೋಡಿಕೊಳ್ಳುವುದರಿಂದ ಬಹಳ ಹೆಚ್ಚಿನ ಉಪಯೋಗವಾಗುತ್ತದೆಯಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಒಳ್ಳೆಯ ಅಭಿಪ್ರಾಯ. ನರ್ಕಾರದವರೂ ಅದೇ ಅಭಿಪ್ರಾಯದಲ್ಲಿದ್ದಾರೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಯೂನಿವರ್ಸಿಟಿ ಸೆನೇಟ್‌ನವರು ಈ ಕಟ್ಟಡಕ್ಕೆ ನರ್ಕಾರದವರು 1 ಲಕ್ಷ ರೂಪಾಯಿ ಕೊಡಬೇಕೆಂದು ಕೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್:—ಬಂದಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗ ತಾವು ಎಲ್ಲಾ ಕಾಲೇಜುಗಳಿಗೂ ಕಟ್ಟಡಗಳನ್ನು ಒದಗಿಸಿದ್ದೀರಾ?

Sri A. G. RAMACHANDRA RAO.—That does not arise from this question.

Casuarina plantations in State Forests.

Q.—562. Sri G. PAPANNA (Sidlaghatta-Chikballapur).—

Will the Government be pleased to state :—

(*a*) the year from which plantation of casuarina plants in the forests of the State has been introduced;

(*b*) the number of acres in which these plants have been planted in each district each year, ever since the plantation of casuarina plants was introduced;

(*c*) out of this, the number of acres of land in which plants raised have been cut in each district, each year, and the amount of income derived;

(*d*) the cost per acre for raising such plantation?

A.—Dr. R. NAGAN GOWDA (Minister for Agriculture).—

(*a*) Casuarina plantations are restricted to Bangalore, Kolar, Tumkur Districts and Mandya Range of Mysore Division. The year from which this was introduced in the above Divisions are :—

Tumkur District	1946-47
Kolar District	1937-38
Bangalore District	1938-39
Mandya Range	1931-32

(*b*) Statement appended below :—

Year	Tumkur	Kolar	Bangalore	Mysore
	Ac. G.	Ac. G.	Ac. G.	Ac. G.
1931-32	...	...	...	2 0
1932-33	...	...	...	4 0
1933-34	...	...	...	4 0
1934-35	...	...	...	3 0
1935-36	...	...	...	4 0
1936-37	...	...	...	54 20
1937-38	...	95 0	...	50 0
1938-39	...	191 0	75 0	5 0
1939-40	...	210 10	173 35	10 0
1940-41	...	165 0	137 32	28 0
1941-42	...	120 20	295 10	117 0
1942-43	...	110 0	201 0	66 0
1943-44	...	195 0	322 20	40 0
1944-45	...	113 0	854 0	30 20
1945-46	...	207 0	500 0	23 20
1946-47	201 0	633 6	829 0	265 0
1947-48	110 0	517 0	785 0	40 0
1948-49	92 0	617 10	1,045 0	...
1949-50	103 0	250 0	384 0	...
1950-51	111 0	359 20	335 0	...
1951-52	113 0	...	77 0	...
1952-53	91 0	49 0	125 0	20 0

(DR. R. NAGAN GOWDA.)

(*c*)—

Year	Mysore		Tumkur		Kolar		Bangalore	
	No. of trees	Amount	Ac.	Amt.	Ac.	Amt.	Ac.	Amt.
		Rs. a. p.		Rs.		Rs.		Rs.
1947-48	246	186 4 0	...	...	105	975	...	...
1948-49	19,050	16,821 5 6	...	...	85	3,186	...	...
1949-50	...	...	...	...	92	5,768	...	...
1950-51	15.004	3,503 8 0	...	...	90	6,400	122	3,790
1951-52	6,295	5,995 5 0	...	...	40	3,600	167	1,173
1952-53	2,583	2,954 4 0	...	...	185	1,950	266	26,230

(*d*) Tumkur District ... 25 per acre.
Kolar ,, ... 25 to 35 ,,
Bangalore ,, ... 30 to 35 ,,
Mysore ,, ... 37½ ,,

N.B.—Exclusive of the cost of Establishment.

ಶ್ರೀ ಜಿ. ಪಾಪಣ್ಣ.—ಈ ರೀತಿ ಸರ್ವೇ ತೋಪುಗಳನ್ನು ನೆಟ್ಟು ಬೆಳೆಸಲು ಸರ್ಕಾರಕ್ಕೆ ಪ್ರತಿ ಎಕರೆಗೂ ಬೀಳುತ್ತಿರುವ ಖರ್ಚು ಎಷ್ಟಾಗುತ್ತದೆಯೋ ಅಷ್ಟಾದರೂ ಬರುತ್ತದೆ ಎಂಬುದನ್ನು ಸರ್ಕಾರದವರು ಗಮನಿಸಿದ್ದಾರೆಯೋ?

ಡಾ॥ ಆರ್. ನಾಗನಗೌಡ.—ಅಷ್ಟು ಖರ್ಚು ಬರುತ್ತದೆ ಎಂದು ತಿಳಿದುಕೊಂಡಿದ್ದೇನೆ. ತಾವು (*d*) ಪ್ರಶ್ನೆಗೆ ಉತ್ತರ ನೋಡಿ. ಬೆಂಗಳೂರಿನಲ್ಲಿ ಒಂದು ಎಕರೆಗೆ 30 ರಿಂದ 35 ರೂಪಾಯಿಗಳವರೆಗೂ ಆಗುತ್ತದೆ. 266 ಎಕರೆಯಷ್ಟು ಕಟಾವಾಗಿದೆ. Amount recovered is about 29 or 30 thousand rupees. ಇದು receipts ನಲ್ಲಿ ಬಂದಿದೆ. ಇದರಲ್ಲಿ ಎಸ್ಟಾಬ್ಲಿಷ್‌ಮೆಂಟು, ಸೂಪರ್‌ವಿಷ್ ಎಲ್ಲಾ ಸೇರಿದೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಿ. ಪಾಪಣ್ಣ.—ತಮ್ಮ ಇಲಾಖೆಯವರು ಬೆಳೆಸುತ್ತಾ ಇರುವ ತೋಪುಗಳ ಪಕ್ಕದಲ್ಲೇ ರೈತರೂ ಸಹ ತಮ್ಮ ಜಮೀನುಗಳಲ್ಲಿ ಸರ್ವೇ ತೋಪುಗಳನ್ನು ಬೆಳೆಸುತ್ತಾ ಇದ್ದಾರೆ. ಅವರಿಗೆ ಏನು ಖರ್ಚು ಬೀಳುತ್ತಿದೆ ಎಂಬುದನ್ನೂ ವಿಚಾರಿಸಿದ್ದೀರಾ?

ಡಾ॥ ಆರ್. ನಾಗನಗೌಡ.—ಮೈಸೂರಿನಲ್ಲಿ ರೈತರು ಪ್ಲಾಂಟೇಷನ್ ಬೆಳೆಸಿದ್ದಾರೆ, ಬಹಳ ಚೆನ್ನಾಗಿ ಬೆಳೆಸಿದ್ದಾರೆ ಎಂದು ತಿಳಿದಿದೆ. ರೈತರು ಮಾಡುವುದಕ್ಕೂ ಡಿಪಾರ್ಟ್‌ಮೆಂಟಿನವರು ಮಾಡುವುದಕ್ಕೂ ಸ್ವಲ್ಪ ವ್ಯತ್ಯಾಸ ಇರುತ್ತದೆ. ಡಿಪಾರ್ಟ್‌ಮೆಂಟಿನವರಿಗೆ ಅಷ್ಟು ಗಮನ ಕೊಡುವುದಕ್ಕೆ ಆಗುತ್ತದೆಯೇ ಎಂಬುದನ್ನು ಹೇಳಲಾರೆ.

ಶ್ರೀ ಜಿ. ಪಾಪಣ್ಣ.—ಸರ್ಕಾರದವರಿಗೆ ಹೆಚ್ಚು ಆದಾಯ ಬರದೇ ಇರುವುದಕ್ಕೆ ಕಾರಣ ಏನು ಎಂಬುದನ್ನು ಕಂಡು ಹಿಡಿದು ಅದನ್ನು ಸರಿಪಡಿಸುವುದು ಆವಶ್ಯಕವಲ್ಲವೇ?

ಡಾ॥ ಆರ್. ನಾಗನಗೌಡ.—ಏನು ಕಾರಣ ಅಂತ ಗೊತ್ತಿದೆ. ಅದನ್ನು ತಿದ್ದುವುದು ಸ್ವಲ್ಪ ಕಷ್ಟ.

ಶ್ರೀ ಎಸ್. ಗೋಪಾಲಗೌಡ.—ಪ್ರತಿ ವರ್ಷ ಶಿಬ್ಬಂದಿಗೆ ಎಷ್ಟು ವೆಚ್ಚ ಆಗಿದೆ ಎಂಬುದನ್ನು ಹೇಳಬಲ್ಲಿರಾ?

ಡಾ॥ ಆರ್. ನಾಗನಗೌಡ.—Figures ಇಲ್ಲಿಲ್ಲ. I will try to get them.

ಶ್ರೀ ಎಲ್. ಸಿದ್ದಪ್ಪ.—ಒಂದು ಎಕರೆಗೆ ಎಷ್ಟು ಗಿಡಗಳು ಆಗುತ್ತವೆ?

ಡಾ॥ ಆರ್. ನಾಗನಗೌಡ.—600 ರಿಂದ 800 ವರೆಗೂ ಆಗುತ್ತವೆ.

ಶ್ರೀ ಎಲ್. ಸಿದ್ದಪ್ಪ.—(*c*) ಪ್ರಶ್ನೆಗೆ ಉತ್ತರವಾಗಿ 1947—48ರಲ್ಲಿ ಮೈಸೂರು, ಗಿಡಗಳ ಸಂಖ್ಯೆ 246, ಮೊಬಲಗು Rs. 186-4-0, ಕೋಲಾರದಲ್ಲಿ 105, ಮೊಬಲಗು Rs. 975 ಎಂದು ಹೇಳಿದ್ದೀರಿ. ಇಷ್ಟು ಹೆಚ್ಚಾಗಿರುವುದಕ್ಕೆ ಕಾರಣವೇನು?

ಡಾ॥ ಆರ್. ನಾಗನಗೌಡ.—ಮೈಸೂರಿನೊಳಗೆ number of trees ಕೊಟ್ಟಿದ್ದಾರೆ, ಕೋಲಾರದಲ್ಲಿ number of acres ಕೊಟ್ಟಿದ್ದಾರೆ. 105 ಎಕರೆಗಳಿಗೆ 975 ರೂಪಾಯಿ ಬಂದಿದೆ.

Road from Chiknaikanahally to Banasandra Railway Station (Repairs)

Q.—658. Sri C. H. LINGADEVARU (Chiknaikanahalli).—

Will the Government be pleased to state :—

(*a*) whether they are aware that the twelve miles of road from Chiknaikanahalli to Banasandra Railway Station is in a bad and dangerous condition;